ಅವರ ರಾಜಕೀಯ ಬಿಟ್ಟು 'ಆವರಣ' ಎಲ್ಲಿದೆ? 'ಆವರಣ'ವೇ ಅವರ ರಾಜಕೀಯದ ನೇರ ಹೇಳಿಕೆ ಅಲ್ವಾ? ಆದರೆ ಅಡಿಗರ ಕಾವ್ಯ ಅಲ್ಲ; ಕಾರಂತರ ಕಾದಂಬರಿಗಳಲ್ಲ. ಬೇಂದ್ರೆಯವರ 'ಸಣ್ಣ ಸೋಮವಾರ' ಒಳ್ಳೆಯ ಕವಿತೆ ಅಂತ ಕೀರ್ತಿನಾಥ ಕುರ್ತಕೋಟಿಯವರೂ ಗುರುತಿಸ್ತಾರೆ. ಬೇಂದ್ರೆಯವರು ಕೊನೆಗಾಲದಲ್ಲಿ ಸಾಯಿಬಾಬಾನ ಭಕ್ತರಾಗಿದ್ರು. ಅವರ ಸಾಯಿಬಾಬಾನ ಭಕ್ತಿಗೂ 'ಸಣ್ಣ ಸೋಮವಾರ' ಕವಿತೆಗೂ ಎಲ್ಲಿಂದೆಲ್ಲಿಗೆ ಸಂಬಂಧ? 'ಸಣ್ಣ ಸೋಮವಾರ' ಒಬ್ಬ ಧಾರವಾಡದ ಸಾಮಾನ್ಯ ಮಹಿಳೆಯೊಬ್ಬಳ ಶ್ರದ್ಧೆಯ ಚಿತ್ರ. ಆ ಶ್ರದ್ಧೆಯನ್ನು ಕಂಡು ಅವರು ಪರವಶರಾಗ್ತಾರೆ.

◆ **ವಿಮರ್ಶಕ ಕೀರ್ತಿನಾಥ ಕುರ್ತಕೋಟಿ ಪ್ರಸ್ತಾಪ ಬಂದಿದ್ದರಿಂದ ಕೇಳ್ತಿದೀನಿ. ಅವರ ವಿಮರ್ಶೆಯ ನಿಮ್ಮ ರೀಡಿಂಗ್ ಏನು?**

ಅವರದು ಮೂಲತಃ ಕ್ಲಾಸಿಕಲ್ ದೃಷ್ಟಿ. ಕೆ.ವಿ. ಸುಬ್ಬಣ್ಣ, ಅಷ್ಟೆಲ್ಲ ಶ್ರೇಷ್ಠತೆಯ ವ್ಯಸನದ ಬಗ್ಗೆ ಕಟುವಾಗಿ ಬರೆದರೂ ಅವರದು ಕ್ಲಾಸಿಕಲ್ ದೃಷ್ಟಿ. ಹಾಗಲ್ಲದಿದ್ದರೆ ಅವರು ಸಂಸ್ಕೃತದ ಧನಂಜಯನ 'ದಶರೂಪಕ'ವನ್ನು ಅನುವಾದ ಮಾಡ್ತಿರಲಿಲ್ಲ. ವೈಯಕ್ತಿಕ ಬದುಕಿನಲ್ಲೂ ಅವರ ಅಭಿರುಚಿ ಎಲ್ಲವೂ ಅಭಿಜಾತವೇ. ಅವರು ಸಮಾಜವಾದಿಯಾಗಿದ್ದು, ನಾನು ಸಮಾಜವಾದಿ ಆಗದಿದ್ದರೆ, ಒಳ್ಳೆಯ ಮನುಷ್ಯನೂ ಅಲ್ಲ ಒಳ್ಳೆಯ ಪ್ರಜಾಪ್ರಭುತ್ವವಾದಿಯೂ ಅಲ್ಲ ಅನ್ನೋ ಕಾರಣಕ್ಕೆ. ಆದ್ದರಿಂದ 'ಶ್ರೇಷ್ಠತೆಯ ವ್ಯಸನ' ಅಂತ ಹೇಳಿದ್ದು ಅದು ಒಂದು ರೀತಿಯಲ್ಲಿ ತಿರುಗಿಬಿದ್ದ ಸಾಕ್ಷಿ. ಕುರ್ತಕೋಟಿಯವರ ಅತ್ಯುತ್ತಮ ವಿಮರ್ಶೆ ನನ್ನ ಪ್ರಕಾರ, 'ಉತ್ತರರಾಮ ಚರಿತ್ರೆ' ಬಗ್ಗೆ ಬರೆದಿದ್ದು. ಬೇಂದ್ರೆ ಕಾವ್ಯದ ಬಗ್ಗೆ ಬರೆದ ಅವರ ವಿಶ್ಲೇಷಣೆಗಳನ್ನು ಓದಿದೀನಿ. 'ನಡೆದು ಬಂದ ದಾರಿ'ಯ ಸಂಪುಟಗಳಿಗೆ ಬರೆದ ಪ್ರಸ್ತಾವನೆಗಳು ಬಹಳ ಚೆನ್ನಾಗಿವೆ. ಕುಮಾರವ್ಯಾಸನ ಬಗ್ಗೆ ಕೇಳಿದಾಗಲೆಲ್ಲ ಅವರು ತುಂಬಾ ಚೆನ್ನಾಗಿ ಮಾತಾಡಿದಾರೆ.

◆ **ನೀವು ಕುರ್ತಕೋಟಿಯವರಷ್ಟೇ ಮುಖ್ಯ ವಿಮರ್ಶಕರು. ಆದರೆ ಬರೆದ ಲೇಖನಗಳನ್ನು ಪುಸ್ತಕರೂಪದಲ್ಲಿ ತರೋಕೆ ಹಿಂಜರಿತೀರಿ. ಯಾಕೆ?**

(ಪಕ್ಕದಲ್ಲೇ ಒಟ್ಟಿದ್ದ ಪುಸ್ತಕಗಳನ್ನು ತೋರಿಸುತ್ತ) ಹೀಗೆ ರಾಶಿಯಲ್ಲಿ ಒಂದಾಗಿ ಬಿದ್ದಿರೋದಿಕ್ಕೆ ನನಗೆ ನಿಜವಾಗಿಯೂ ಮನಸ್ಸಿಲ್ಲಾರಿ. ನಾ ಬಹುತೇಕ ವಿಮರ್ಶೆಗಳನ್ನು ಓದೋದೇ ಇಲ್ಲ. ಈಗ ವಿಮರ್ಶೆ ಬಿಡಿ, ಮೂಲಕೃತಿಗಳನ್ನು ಓದೋಕೂ ಪುರುಸೊತ್ತಾಗ್ತಿಲ್ಲ. ಏನೇನೋ ಹಾಳುಮೂಳು ಕೆಲಸ ಬಂದು ಬಿಡ್ತಾವೆ. ಅದನ್ನೇ ಮಾಡಿಕೊಂಡು ಕಾಲ ಕಳೀತಿದೀನಿ. ಬರೇ ಎಂ.ಎ. ವಿದ್ಯಾರ್ಥಿಗಳು ಓದುವ ಪುಸ್ತಕ ಬರೆದು ಪ್ರಕಟಿಸಿ ಏನಾಗಬೇಕಿದೆ? ನಾನು ಆಸಕ್ತಿಯಿಂದ ಓದೋದು ಕಿರಂನ; ಬಹಳ ಮನಸ್ಸು ಕೊಟ್ಟು ಓದಿದ್ದು ಕುರ್ತಕೋಟಿ – ಡಿ.ಆರ್. ನಾಗರಾಜ ಅವರನ್ನೇ ಅಂತ ಕಾಣ್ತದೆ.

◆ **ಡಿ.ಆರ್. ಬರಹದ ವಿಶಿಷ್ಟತೆ ಏನು?**

ಬಹಳ ಫೋರ್ಸ್‌ಫುಲ್ ಆದ ಬರವಣಿಗೆ ಅದು. ಹೇಳಿದ್ದನ್ನು ಖಂಡಿತವಾಗಿ ಸ್ವತಃ ನಂಬಿ ಬರೆದಹಾಗೆ ಬರೀತಾರೆ. ಅಲ್ಲೊಂದು ಪ್ಯಾಶನ್ ಇದೆ; ತೀವ್ರತೆಯಿದೆ. ಏನಿಲ್ಲಂದರೂ ತಾನು ಓದಿದ್ದನ್ನು ನಿಜಕ್ಕೂ ಓದಿ ಅನುಭವಿಸಿ ಮೆಚ್ಚಿಕೊಂಡು ಬರೆದಿದ್ದಾರೆ. ಅವರು ನಮಗೆ ಕೆಲವು ಹೊಸದೃಷ್ಟಿಗಳನ್ನು ಕೊಡ್ತಿದ್ದರು. ಉದಾಹರಣೆಗೆ ಗಾಂಧಿ ಮತ್ತು ಅಂಬೇಡ್ಕರ್ ನಡುವೆ ಯಾವ ತರಹದ ಅನುಸಂಧಾನ